ರಾಜ್ಯದಲ್ಲಿ ಹಿಂದಿ ಶಿಕ್ಷಣ ಕಡ್ಡಾಯ ರದ್ದು ಮಾಡುವುದು

1750 (2104) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಹಿಂದಿ ಶಿಕ್ಷಣ ಕಡ್ಡಾಯ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಹಿಂದಿಪಾಠ ಮಾಡುವ ಶಿಕ್ಷಕರು ಎಲ್ಲಾ ಶಾಲೆಗಳಲ್ಲೂ ಇರುತ್ತಾರೆಯೇ?

ಇ) ಹಿಂದಿ ಶಿಕ್ಷಕರ ಕೊರತೆ ಗಣನೀಯವಾಗಿದ್ದರೂ ಸರ್ಕಾರ ಹಿಂದಿ ಕಡ್ಡಾಯ ಮಾಡಲು ಕಾರಣವೇನು?

ಈ) ಕಡ್ಡಾಯ ಮಾಡಿದ್ದರೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದೇ?

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು)

ಅ) ಇಲ್ಲ

ಆ) ಇಲ್ಲ

ಇ) ಹಿಂದಿ ಭಾಷೆಯನ್ನು ಕಡ್ಡಾಯ ಮಾಡಿರುವುದಿಲ್ಲ. ಆದಾಗ್ಯೂ ಹಿಂದಿ ಭಾಷೆಯನ್ನು ಒಂದನೇ ಮತ್ತು ಮೂರನೇ ಭಾಷೆಯಾಗಿ ಇತರೆ 8 ಭಾಷೆಗಳೊಂದಿಗೆ ಭೋಧಿಸಲು ಅವಕಾಶ ಮಾಡಲಾಗಿದೆ. ಹೆಚ್ಚಿನ ಕನ್ನಡ ಮಾಧ್ಯಮ ವಿದ್ಯಾರ್ಥಿಗಳು ಹಿಂದಿಯನ್ನು 3ನೇ ಭಾಷೆಯನ್ನಾಗಿ ಓದಲು ಅಪೇಕ್ಷಿಸುತ್ತಾರೆ.

ಈ) ಕಡ್ಡಾಯ ಮಾಡಿಲ್ಲವಾಗಿ ತಕ್ಷಣ ನೇಮಕ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗಾಗಿ ಮಂಜೂರಾದ ಹಿಂದಿ ಶಿಕ್ಷಕರ ಹುದ್ದೆಗಳು ಖಾಲಿಯಾದಾಗ ಪ್ರತಿ ಬಾರಿಯೂ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಭರ್ತಿ ಮಾಡಲಾಗುತ್ತಿದೆ.

ಅದರಂತೆ 2001-02ನೇ ಸಾಲಿನ ನೇಮಕಾತಿಯಲ್ಲಿ ನಡೆದ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲೂ ಖಾಲಿ ಇದ್ದ 1459 ಹಿಂದಿ ಶಿಕ್ಷಕರನ್ನು ಪ್ರಕಟಿಸಿ 1045 ಅರ್ಹ ಹಿಂದಿ ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ.

ಇದರಿಂದಾಗಿ ಹಿಂದಿ ಶಿಕ್ಷಕರ ಕೊರತೆಯನ್ನು ಆದಷ್ಟೂ ಪರಿಹರಿಸಿದ್ದು ಉಳಿದಂತೆ ಕೊರತೆಯಿಂದ ಶಾಲೆಗಳಲ್ಲಿ ಹಿಂದಿ ಬಲ್ಲ ಸಹಶಿಕ್ಷಕರಿಂದ ಹಿಂದಿ ಭೋದನೆಗೆ ಏರ್ಪಾಡು ಮಾಡಿ ಹಿಂದಿ ಭೋಧನೆಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಬಿ.ಇಡ್ ಪದವಿಧರರಿಗೆ ಉದ್ಯೋಗ ನೇಮಕಾತಿಗೆ ಇರುವ ಆಯ್ಕೆಯ ಮಾನದಂಡ

1752 (2106) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಇಡ್ ಪದವೀಧರರಿಗೆ ಉದ್ಯೋಗ ನೇಮಕಾತಿಗಾಗಿ ಇರುವ ಆಯ್ಕೆಯ ಮಾನದಂಡಗಳೇನು;

ಆ) ಸದರಿ ಹುದ್ದೆಗಳ ಭರ್ತಿಗಾಗಿ 2 ಸಾವಿರ ಪ್ರೌಢಶಾಲಾ ಸಹ ಶಿಕ್ಷಕರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು ನಿಜವೇ;